(ಆ) ಮತ್ತು (ಇ) ಕಾರಂಜಾ ಯೋಜನೆಯ ಸಂತ್ರಸ್ತರಿಗೆ ಪರಿಹಾರ ಮೊತ್ತವಾಗಿ ಈವರೆಗೆ ` 4841.04 ಲಕ್ಷಗಳನ್ನು ಪಾವತಿಸಲಾಗಿದೆ. ನಂತರ ಸರ್ಕಾರದ ದಿನಾಂಕ: 02.10.2010ರ ಪತ್ರದಲ್ಲಿ ನೀಡಿದ ಸೂಚನೆಯ ಮೇರೆಗೆ ಹೆಚ್ಚುವರಿಯಾಗಿ ಮುಳುಗಡೆಯಾಗುತ್ತಿರುವ 922.09 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಕ್ರಿಯೆ ಪ್ರಾರಂಭಿಸಲಾಗಿದ್ದು, ಇದಕ್ಕಾಗಿ ` 2100 ಲಕ್ಷಗಳನ್ನು ಜಲಸಂಪನ್ಮೂಲ ಇಲಾಖೆಯಿಂದ ವಿಶೇಷ ಭೂ–ಸ್ವಾಧೀನಾಧಿಕಾರಿಗಳು, ಬೀದರ್ ಬಿಡುಗಡೆ ಮಾಡಲಾಗಿದೆ.

ಈ) ಭೂಸ್ವಾದೀನ ಪ್ರಕ್ರಿಯೆಯನ್ನು ಜರುಗಿಸಲು ಭೂಸ್ವಾಧೀನ ಕಾಯ್ದೆಯ ನ್ವಯ ಮೂರು ವರ್ಷಗಳ ಕಾಲಾವಕಾಶ ಇರುತ್ತದೆ. ಈಗಾಗಲೇ 4(1), 6(1) ಅಧಿಸೂಚನೆ ಹೊರಡಿಸಿದ್ದು, ಕೇಂದ್ರ ಸರ್ಕಾರದ ಹೊಸ ಭೂಸ್ವಾಧೀನ ಕಾಯ್ದೆ ದಿನಾಂಕ: 01.01.2014 ರಿಂದ ಜಾರಿಗೆ ಬಂದಿದ್ದು ಅದರಂತೆ ಅವಾರ್ಡ ಅನ್ನು ಹೊರಡಿಸಿ ಶೀಘ್ರದಲ್ಲೇ ಪರಿಹಾರವನ್ನು ಪಾವತಿಸಲಾಗುವುದು.

ಸರ್ಕಾರಿ ಜಮೀನನ್ನು ಸಾರ್ವಜನಿಕ ಉಪಯೋಗಕ್ಕಾಗಿ ಮೀಸಲಿಡುವುದು:

1037 (1880); ಶ್ರೀ ಅಶೋಕ್ ಖೇಣಿ (ಬೀದರ್)

ಅ) ಬೀದರ್ ದಕ್ಷಿಣ ವಿಧಾನ ಸಭಾ ಕ್ಷೇತ್ರದಲ್ಲಿ ಸರ್ಕಾರಿ ಜಮೀನುಎಷ್ಟು ಎಕರೆ ಪ್ರದೇಶವಿರುತ್ತದೆ.

ಆ) ಸರ್ಕಾರಿ ಜಮೀನಿನಲ್ಲಿ ಸಾರ್ವಜನಿಕರ ಅನುಕೂಲಕ್ಕೆ ಅಗತ್ಯವಾದ ಭೂಮಿ ಕಾಯ್ದಿರಿಸಲಾಗಿದೆಯೇ;

ಇ) ಸರ್ಕಾರಿ ಕಛೇರಿ, ಶಾಲೆ ಕಾಲೇಜು, ಆಸ್ಪತ್ರೆ ಮತ್ತು ಕ್ರೀಡಾಂಗಣಕ್ಕೆ ಎಷ್ಟು ಭೂಮಿ ಮೀಸಲಾಗಿದೆ (ವಿವರ ನೀಡುವುದು);

ಈ) ಸರ್ಕಾರಿ ಜಮೀನನ್ನು ಕಾಯ್ದಿರಿಸಲು ಕಾನೂನು ತೊಡಕುಗಳು ಏನಾದರು ಇದೆಯೇ?

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಬೀದರ್ ದಕ್ಷಿಣ ವಿಧಾನ ಸಭಾ ಕ್ಷೇತ್ರದಲ್ಲಿ ಒಟ್ಟು 17976 ಎಕರೆ 34 ಗುಂಟೆ ಸರ್ಕಾರಿ ಜಮೀನನ್ನು ಇರುತ್ತದೆ.

ಆ) ಸರ್ಕಾರಿ ಜಮೀನಿನಲ್ಲಿ ಸಾರ್ವಜನಿಕರ ಅನುಕೂಲಕ್ಕೆ ಅವರ ಬೇಡಿಕೆಯಂತೆ ಅಗತ್ಯವಾದ ಭೂಮಿಯನ್ನು ಕಾಯ್ದಿರಿಸಲಾಗುತ್ತದೆ.

ಇ) ಬೀದರ್ ದಕ್ಷಿಣ ವಿಧಾನ ಸಭಾ ಕ್ಷೇತ್ರದಲ್ಲಿ ಸರ್ಕಾರಿ ಕಛೇರಿ, ಶಾಲಾ ಕಾಲೇಜು ಆಸ್ಪತ್ರೆಗಳಿಗೆ ಆಯಾ ಇಲಾಖೆಯು ಬೇಡಿಕೆಯಂತೆ ಮೀಸಲಿಡಲಾಗಿದ್ದು ಹಾಗೂ ಅವರ ಬೇಡಿಕೆಯಂತೆ ಭೂಮಿಯನ್ನು ಲಭ್ಯತೆ ಇದ್ದಲ್ಲಿ ನಿಯಮಾನುಸಾರ ನೀಡಲಾಗುತ್ತಿದ್ದು ವಿವರಗಳು ಈ ಕೆಳಗಿನಂತಿವೆ.

ಕ್ರ ಸಂ	ಸರ್ಕಾರಿ ಇಲಾಖೆಗಳು	ವಿಸ್ತೀರ್ಣ ಎ/ಗುಂ ಗಳಲ್ಲಿ
1	ಸರ್ಕಾರಿ ಪ್ಯಾಲಿಟೆಕ್ನಿಕ್ ಕಾಲ್ಲೇಜ್ ಮೈಲೂರ, ಬೀದರ	12 ಎಕರೆ
2	ಪೊಲೀಸ್ ತರಬೇತಿ ಕೇಂದ್ರ	99 ಎಕರೆ
3	ಜೆಸ್ಕಾಂ ಸಬ್ ಸ್ಟೇಷನ್	4 ಎಕರೆ

ಕಮಠಾಣ ರೈತ ಸಂಪರ್ಕ ಕೇಂದ್ರಕ್ಕೆ 20 ಗುಂಟೆ ಚಿಟ್ಟಾ ರೈತ ಸಂಪರ್ಕ ಕೇಂದ್ರಕ್ಕೆ 20 ಗುಂಟೆ ಹಾಗೂ ಘೋಡಂಪಳ್ಳಿ ಗ್ರಾಮದಲ್ಲಿ ಕ್ರೀಡಾಂಗಣಕ್ಕಾಗಿ ಭೂಮಿ ಮಂಜೂರು ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.

ಈ) ಇಲ್ಲ.